# <u>ನಂದ ತನಯ ಗೋವಿಂದನ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 298.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 311.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics in both the above references are same and the singer has followed these lyrics.

ರಾಗ: ಭೀಮಪಲಾಸ್ (ಕಮಾಚ್) ತಾಳ: ಖಂಡ ಛಾಪು

ನಂದ ತನಯ ಗೋವಿಂದನ ಭಜಿಪುದಾ-
ನಂದವಾದ ಮಿಠಾಯಿ ॥ ಪ ॥

ಬಂಧಗಳನು ಭವ ರೋಗಗಳೆಲ್ಲನು
ನಿಂದಿಪುದೀ ಮಿಠಾಯಿ ॥ ಅಪ ॥

ದಧಿ ಘೃತ ಕ್ಷೀರಕ್ಕಿಂತಲು ಬಹು
ಅಧಿಕವಾದ ಮಿಠಾಯಿ
ಕದಳೀ ದ್ರಾಕ್ಷಿ ಖರ್ಜೂರ ರಸಗಳನು
ಮೀರುವುದೀ ಮಿಠಾಯಿ ॥ ೧ ॥

ಪಂಚ ಭಕ್ಷ್ಯಗಳ ಷಡ್ರಸಾನ್ನಗಳ
ಮಿಂಚಿದಂಥ ಮಿಠಾಯಿ
ಕಂಚೀಶನೆ ರಕ್ಷಿಸು ಎಂದುಸಿರುವ-
ರಂಜಿಕೆ ಬಿಡಿಪ ಮಿಠಾಯಿ ॥ ೨ ॥

ಜಪ ತಪ ಸಾಧನಗಳಿಗಿಂತಲು ಬಹು
ಅಪರೂಪದ ಮಿಠಾಯಿ

ಜಿಪುಣ ಮತಿಗಳಿಗೆ ಸಾಧ್ಯವಿಲ್ಲದಿಹ
ಪುರಂದರ ವಿಠಲ ಮಿಠಾಯಿ || ೩ ||

**Classification:** Keerthane
**Ankita:** purandara vittala
**Location:** NA
**Category:** Jeevanoddhara
**Sub-Category:** Krishna, bhajane, govinda, bandhu, bhava, roga, bayyi, tuppa, halu, anna, bhaya, japa, tapa,
**Pravachana:** NA
**Explanation:** NA